ಬಳೆ... ಒಂದು ಎರಡಲ್ಲ, ಇಪ್ಪತ್ತು ಮನೆಯಿಂದ ನಾನಾ ತರದ ವಡವೆಗಳು ಬಂದಿದ್ದವು. ನನ್ನನ್ನು ಚಾಪೆಯ ಮೇಲೆ ಕೂರಿಸಿ ಮುಂದೆ ಆಭರಣಗಳನ್ನು ಇಟ್ಟು, 'ಯಾವುದು ಬೇಕೋ ಆರಿಸಿಕೋ ವಿಜಿಯ' ಎಂದರು. ನನಗೆ ತಬ್ಬಿಬ್ಬು. ನಮ್ಮ ಸಕುಂತ 'ಏನಕ್ಕಯ್ಯ ಇದು ಚಿನ್ನದ ರಾಶಿ' ಅಂತ ತಮಾಷೆ ಮಾಡುತ್ತಲೇ ನನ್ನನ್ನು ಅಲಂಕರಿಸಿದ್ದಳು. ನೂರಾರು ಜನರ ಆಶೀರ್ವಾದದೊಂದಿಗೆ ಶಶಿಧರನೊಂದಿಗೆ ನನ್ನ ಮದುವೆ ನಡೆಯಿತು. ಹೆಣ್ಣು ಹೊರಡಿಸುವಾಗ ನಮ್ಮ ಸಕುಂತಳ ಗೋಳಾಟ ಹೇಳತೀರದು.

ಇಪ್ಪತ್ತೊಂದನೆಯ ವಯಸ್ಸಿಗೆ ಒಂದು ಮನೆಯ ಸೊಸೆಯಾಗಿ ತಾಯಿ ಮನೆಯಿಂದ ದೂರವಾದೆ. ಶಶಿಧರ ನನ್ನನ್ನು ಅದೆಷ್ಟು ಪ್ರೀತಿಸುತ್ತಿದ್ದರೆಂದರೆ ನಾನು ಈ ಜಗತ್ತಿನ ಪರಮಸುಖಿ ಎಂದುಕೊಂಡೆ, ಒಂದು ಕ್ಷಣವೂ ನನ್ನನ್ನು ಬಿಟ್ಟಿರುತ್ತಿರಲಿಲ್ಲ. ಆಷಾಢ, ಗೌರಿ ಹಬ್ಬ ಅಂತ ತವರಿಗೆ ಹೊರಟರೆ ಹೋಗಲೇಬೇಕಾ? ಎನ್ನುತ್ತಾ ಸಪ್ಪಗೆ ಕೂರುತ್ತಿದ್ದರು. ನನಗೆ ಎಂತಾ ಅತ್ತೆ ಸಿಕ್ಕಿದ್ದರು ಅಂದರೆ ಅವರನ್ನು ಅತ್ತೆ ಎನ್ನುವುದೇ ದೊಡ್ಡ ತಪ್ಪು. ನನ್ನ ತಾಯಿ ಅವರು. ಬೆಳಗ್ಗೆ ಬಾಗಿಲಿಗೆ ರಂಗೋಲಿ ಹಾಕಿ ಸ್ನಾನ ಮಾಡಿ ದೇವರಿಗೆ ದೀಪ ಹಚ್ಚಿದರೆ, ನನ್ನ ಕೆಲಸ ಮುಗಿಯಿತು. ಇತರೆ ಒಂದೇ ಒಂದು ಕೆಲಸವನ್ನು ನನ್ನ ಹತ್ತಿರ ಮಾಡಿಸುತ್ತಿರಲಿಲ್ಲ. ತಲೆಬಾಚಿ ಜಡೆ ಹಾಕಿ ಹೂ ಮುಡಿಸುತ್ತಿದ್ದರು. ಹಾಲು ಜೇನಿನಂತ ನನ್ನ ಸಾಂಸಾರಿಕ ಜೀವನ ಮೂರು ವರ್ಷ ತುಂಬುವ ಹೊತ್ತಿಗೆ ನಮ್ಮ ಮೂವರ ಬದುಕಿನಲ್ಲಿ ಹೊಸ ಅತಿಥಿಯ ಪ್ರವೇಶವಾಯ್ತು. ಪುಟ್ಟ ಕಂದ ಬಂದು ನನಗೆ ಮಾತೃಸ್ಥಾನ ನೀಡಿದ. ನಮ್ಮ ಸಕುಂತ ಅವನಿಗೆ ರಾಜೇಂದ್ರ ಎಂದು ಹೆಸರಿಟ್ಟಳು.

ನಾನಾಗ ಮೂರು ತಿಂಗಳ ಬಾಣಂತಿ. ಬಿಸಿ ನೀರಿನ ಸ್ನಾನ. ಬಿಸಿಯೂಟ, ನಮ್ಮಮ್ಮನ ಬಾಣಂತನ. ವಿಪರೀತ ಸೆಕೆಯಾಗುತ್ತಿತ್ತು. ಮಲಗಿದಲ್ಲೇ ಮಲಗಿ ಬೇಜಾರ. ಸ್ವಲ್ಪ ಅಂಗಳದಲ್ಲಿ ತಿರುಗಾಡನ ಅಂತ ನಿಧಾನಕ್ಕೆ ಹೊರಬಂದೆ. ರೋಡಿನ ಕಡೆ ಯಾರಾದ್ರೂ ಬಂದ್ರಾ ಅಂತ ತಿರುಗಿ ನೋಡಿದೆ. ಶಶಿಧರ ಬರುತ್ತಿದ್ದರು. ಇನ್ನು ಒಂದು ವಾರನೂ ಆಗಿರಲಿಲ್ಲ ಬಂದು ಹೋಗಿ. ನನಗೆ ಇವರನ್ನು ನೋಡಿ ಸಂತೋಷವಾಯಿತು. 'ಬನ್ನಿ ಬನ್ನಿ. ಕೈಕಾಲು ತೊಳೆದುಕೊಳ್ಳಿ. ಊಟ ಮಾಡಿ' ಎಂದೆ.

'ಇರಲಿ ಇರಲಿ, ವಿಜಿಯಾ ಅಮ್ಮನಿಗೆ ಹುಷಾರಿಲ್ಲ. ಗರ್ಭಕೋಶದ ಸಮಸ್ಯೆ.



